ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM.. ಫೋನ್ : 114

...ನೇ ವರ್ಷ 35ನೇ ಸಂಚಿಕೆ ಕೊಪ್ಪ 2-5-1990 ಬುಧವಾರ ಬೆಲೆ 50 ಪೈಸೆ

ಉಪ ಚುನಾವಣೆಗಳ ಫಲಿತಾಂಶಗಳು

ಕೊಪ್ಪ : ಈ ತಾಲ್ಲೂಕಿನ ಜಯಪುರ ಮಂಡಲದಲ್ಲಿ ಮಳಿಗೆ ಚಂದ್ರಶೇಖರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಉಪ ಚುನಾವಣೆಯಲ್ಲಿ ಜನತಾ ದಳದ ಪ್ರಭಾಕರ್ ಜಯ ಗಳಿಸಿದ್ದಾರೆ.

ಅಗಳಗಂಡಿ ಮಂಡಲದಲ್ಲಿ ಶಿವಾನಂದ ಪ್ರಕಾಶ್ ತೆರವು ಮಾಡಿದ ಸ್ಥಾನವನ್ನು ಕಾಂಗ್ರೆಸ್‌ನ ಸತ್ಯಮೂರ್ತಿ [161] ಗದ್ದಿದ್ದಾರೆ ಸಮೀಪ ಪ್ರತಿಸ್ಪರ್ಧಿ ಚಂದ್ರಶೇಖರ್ [ಪಕ್ಷೇತರ] 64 ಮತಗಳನ್ನು ಗಳಿಸಿದ್ದಾರೆ.

ಅತ್ತಿಕುಡಿಗೆ ಮಂಡಲದಲ್ಲಿ ಕೊಪ್ಪ ಗುಂಡಿ ಮಹಿಳಾ ಮೀಸಲು ಸ್ಥಾನಕ್ಕೆ ಜನತಾ ದಳದ ಕೆ. ಗಿರಿಜಾ ಆಯ್ಕೆಯಾಗಿದ್ದಾರೆಂದು ತಿಳಿದು ಬಂದಿದೆ. ಇದೇ ಮಂಡಲದ ಬೆತ್ತದಕೊಳಲು ಕ್ಷೇತ್ರಕ್ಕೆ ಘೋಷಣೆಯಾಗಿದ್ದ ಚುನಾವಣೆ ಹೈಕೋರ್ಟ್ ತಡೆಯಾಜ್ಞೆಯಿಂದ ರದ್ದಾಗಿದೆ. ಪ್ರಧಾನ ಬಿ ಎನ್ ಭಾಸ್ಕರ್‌ರ ಸದಸ್ಯತ್ವ ರದ್ದುಗೊಂಡು, ಆ ಸ್ಥಾನಕ್ಕೆ ಚುನಾವಣೆ ಘೋಷಿಸಿದ್ದ ಜಿಲ್ಲಾಧಿಕಾರಿಗಳ ಕ್ರಮಕ್ಕೆ ಭಾಸ್ಕರ್ ತಡೆಯಾಜ್ಞೆ ತಂದಿದ್ದಾರೆಂದು ಹೇಳಲಾಗಿದೆ.

ಕಿಗ್ಗ ಮಂಡಲ, ಶೃಂಗೇರಿ ತಾ॥

ಶೃಂಗೇರಿ ತಾ॥ ಮರ್ಕಲ್ ಮಂಡಲದಲ್ಲಿ ಕಾಂಗ್ರೆಸ್‌ನ ಸುಬ್ಬಣ್ಣ ಗೌಡರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎಚ್. ಎಸ್. ರತ್ನಾಕರ್ ಜನತಾ ದಳದ ಎಚ್. ಎನ್. ರವೀಂದ್ರ ಅವರನ್ನು ಸೋಲಿಸಿ ಆಯ್ಕೆಯಾಗಿದ್ದಾರೆ.

ವಿದ್ಯಾರಣ್ಯಪುರ ಮಂಡಲದ ಕೊಪ್ಪವಳ್ಳಿ ಮಹಿಳಾ ಮೀಸಲು ಸ್ಥಾನವನ್ನು ಕಾಂಗ್ರೆಸ್ ಅಭ್ಯರ್ಥಿ ಸಾವಿತ್ರಿ ನಾಗರಾಜ್ ಗೆದ್ದುಕೊಂಡಿದ್ದಾರೆ.

ಮಧ್ಯಾಂತರ ಮಂಡಲ ಪಂಚಾಯಿತ್ತಿಗಳ ಚುನಾವಣೆಯಲ್ಲಿ

ಶೃಂಗೇರಿ ಕ್ಷೇತ್ರಾದ್ಯಂತ ಕಾಂಗ್ರೆಸ್‌ಗೆ ಮೇಲುಗೈ

ಕೊಪ್ಪ : ಶೃಂಗೇರಿ ಕ್ಷೇತ್ರದ ಮೂರೂ ಮಧ್ಯಾಂತರ ಮಂಡಲ ಪಂಚಾಯಿತ್ತಿಗಳಿಗೆ ನಡೆದ ಚುನಾವಣೆಯಲ್ಲಿ ಶೃಂಗೇರಿ ಮತ್ತು ಕೊಪ್ಪದಲ್ಲಿ ಕಾಂಗ್ರೆಸ್ ನಿಚ್ಚಳ ಮೇಲುಗೈ ಸಾಧಿಸಿದ್ದು, ನ. ರಾ. ಪುರದಲ್ಲಿ ಜನತಾ ದಳದೊಂದಿಗೆ ಸಮ ಬಲದಲ್ಲಿದೆ.

ಶೃಂಗೇರಿಯ 10 ಸ್ಥಾನಗಳಲ್ಲಿ ಕಾಂಗ್ರೆಸ್ 4 ಸ್ಥಾನ ಗಳಿಸಿದೆ. ಬಿಜೆಪಿ 3 ಮತ್ತು ಪಕ್ಷೇತರರು 2 ಸ್ಥಾನಗಳನ್ನು ಗಳಿಸಿದ್ದು, ದಳ ಕೇವಲ 1 ಸ್ಥಾನ ಪಡೆದಿದೆ.

ಕೊಪ್ಪದ 11 ಸ್ಥಾನಗಳ ಪೈಕಿ ಕಾಂಗ್ರೆಸ್ 5 ಸ್ಥಾನಗಳನ್ನು ಗೆದ್ದಿದೆ. ದಳ 3 ಸ್ಥಾನಗಳನ್ನೂ, ಪಕ್ಷೇತರರು (ದಳದ ಬೆಂಬಲಿತರು ಸೇರಿ) 3 ಸ್ಥಾನಗಳನ್ನೂ ಗಳಿಸಿದ್ದಾರೆ.

ನ. ರಾ. ಪುರದಲ್ಲಿ 15 ಸ್ಥಾನಗಳ ಪೈಕಿ ಕಾಂಗ್ರೆಸ್ 6 ಸ್ಥಾನಗಳನ್ನೂ, ದಳ ಮತ್ತು ಅದರ ಬೆಂಬಲಿತರು 6 ಸ್ಥಾನಗಳನ್ನೂ, ಪಕ್ಷೇತರರು 3 ಸ್ಥಾನಗಳನ್ನೂ ಗೆದ್ದಿದ್ದಾರೆ.

ಶೃಂಗೇರಿ (ಗೆದ್ದವರ ಪಟ್ಟಿ)

1ನೇ ವಿಭಾಗ : ಬಿ. ಕೆ. ರವಿ (ಪಕ್ಷೇತರ) 92

2ನೇ ವಿಭಾಗ : ಎಚ್. ಆರ್. ಕೃಷ್ಣಮೂರ್ತಿ (ಕಾಂ) 279, ವನಜಾಕ್ಷಿ (ಕಾಂ) 179, ಸುಮತಿ (ಬಿಜೆಪಿ) 183.

3ನೇ ವಿಭಾಗ : ವಿ ಶೇಷಾದ್ರಿ ಭಟ್ (ದಳ) 96, ಸರೋಜ (ಕಾಂ) 108.

4ನೇ ವಿಭಾಗ : ಕೆ ವಾಣಿ (ಬಿಜೆಪಿ) 80. ಯು. ಎಸ್. ಶ್ರೀಧರ್ (ಬಿಜೆಪಿ) 47

5ನೇ ವಿಭಾಗ : ಎಸ್. ನಾಗರಾಜು (ಕಾಂ) 148, ಎಚ್. ಡಿ. ಪ್ರಭಾಕರ [ದ] 56

ಕೊಪ್ಪದಲ್ಲಿ ಕೃಷಿಕರೊಡನೆ 'ಅಡಿಕೆ ಪತ್ರಿಕೆ'ಯ ವಿಚಾರ ವಿನಿಮಯ

ಕೊಪ್ಪ : 'ಪತ್ರಿಕಾ ಮಾಧ್ಯಮದ ಮಹತ್ವ ಮತ್ತು ಅಡಿಕೆ ಪತ್ರಿಕೆ' ಈ ವಿಚಾರವಾಗಿ ಇಲ್ಲಿ ಮೇ 8. ರ ಮಂಗಳವಾರ ಅಪರಾಹ್ನ 3-30 ಕ್ಕೆ ವಿಚಾರ ವಿನಿಮಯ ನಡೆಯಲಿದೆ. 'ಅಡಿಕೆ ಪತ್ರಿಕೆ' ಸಂಪಾದಕರಾದ 'ಶ್ರೀ' ಪಡ್ರೆಯವರು ಭಾಗವಹಿಸುವ ಈ ಕಾರ್ಯಕ್ರಮ ಬಾಳಗಡಿ ರಸ್ತೆಯ ...ಲ್ಲಿರುವ ಹರಂದೂರು ಅನಂತ... ಅವರ ಕೃಷಿ ಕ್ಷೇತ್ರದಲ್ಲಿ ನಡೆಯುತ್ತದೆ.

ಇಲ್ಲಿನ ಸಿಂಡಿಕೇಟ್ ಬ್ಯಾಂಕ್, ಕೃಷಿ ವಿಚಾರ ವಿನಿಮಯ ಕೇಂದ್ರ ಮತ್ತು ...ಜೇಸಿ ಸಂಯುಕ್ತಾಶ್ರಯದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಆಸಕ್ತ ಕೃಷಿಕರೆಲ್ಲರೂ ಭಾಗವಹಿಸಬಹುದು.

ಗೆದ್ದ ಪ್ರಮುಖರು, ಸೋತ ಪ್ರಮುಖರು

ಕೊಪ್ಪ : ಮಧ್ಯಾಂತರ ಮಂಡಲ ಪಂಚಾಯಿತ್ತಿ ಚುನಾವಣೆಗಳಲ್ಲಿ ಮಾಜಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರಾದಿಯಾಗಿ ಹಲವು ತಲೆಗಳು ಉರುಳಿವೆ, ಹಲವರು ಮತ್ತೆ ಆಯ್ಕೆಯಾಗಿದ್ದಾರೆ. ಕಳೆದ ಬಾರಿ ಅಧಿಕಾರದಲ್ಲಿದ್ದ ಹಲವು ಮಂದಿ ಚುನಾವಣೆಗೇ ಇಳಿಯಲಿಲ್ಲ. ಅಂಥ ಕೆಲವರ ಹೆಸರುಗಳು ಇಲ್ಲಿವೆ.

ಕೊಪ್ಪ

ಕಳೆದ ಬಾರಿಯ ಅಧ್ಯಕ್ಷ (ಪ್ರಧಾನ) ಮಂಜುನಾಥ ಶೆಟ್ಟಿ ಗೆದ್ದವರಲ್ಲಿ ಪ್ರಮುಖರು. 83ರವರೆಗೆ ಪುರಸಭಾಧ್ಯಕ್ಷರಾಗಿದ್ದು, 83 ರಲ್ಲಿ ಸೋಲುಂಡಿದ್ದ ಮಹಮದ್ ಸಾದಿಕ್ ಪುನರಾಯ್ಕೆಗೊಂಡಿದ್ದಾರೆ ಕಳೆದ ಬಾರಿಯ ಸದಸ್ಯರಲ್ಲಿ ಶ್ರೀನಿವಾಸ ಶೆಟ್ಟಿ, ಗೋಪಿ, ಕೆ. ಕೃಷ್ಣ ಮತ್ತೆ ಆಯ್ಕೆಯಾಗಿದ್ದಾರೆ.

ಕಳೆದ ಬಾರಿಯ ಸದಸ್ಯರಲ್ಲಿ ಇಕ್ಬಾಲ್ ಅಹಮದ್, ಎಂ. ಎಸ್. ನಾರಾಯಣ್, ಬಿ ಎಲ್ ಜಿ ಕೆ ಆಚಾರ್, ಶೀನ ಭಂಡಾರಿ, ಜಾನಕಿ ನಾಗರಾಜ್, ಸೂರ್ಯನಾರಾಯಣ (ಸ್ವಾಮಿ) ಇವರೆಲ್ಲ ಸೋತಿದ್ದಾರೆ. ಅಲ್ಲದೆ ಮಾಜಿ ಉಪಾಧ್ಯಕ್ಷ ಕೆ.ಜೆ. ಚಂದ್ರಶೇಖರ್ ಮಾಜಿ ಸದಸ್ಯ ಎಸ್. ಎ. ಕುಮಾರ್, ಕಾಂಗ್ರೆಸ್‌ಯ ಪ್ರಬಲ ಅಭ್ಯರ್ಥಿ ಶಶಿಕುಮಾರ್ ಜನತಾ ದಳದ ಅಬ್ದುಲ್ ಖಾದರ್, ಸಿಪಿಐ ಇಬ್ಬರು ಅಭ್ಯರ್ಥಿಗಳು ಸೋತಿದ್ದಾರೆ. ಮಂಜುನಾಥ ಶೆಟ್ಟರಿಗೆ ಪ್ರಬಲ ಪ್ರತಿಸ್ಪರ್ಧೆ ನೀಡಬಯಸಿದ್ದ ಅಣ್ಣಪ್ಪ ನಾಯಕ್ 5 ಮತ್ತು 6ನೇ ವಿಭಾಗಗಳೆರಡರಲ್ಲೂ ಸೋಲಪ್ಪಿದ್ದಾರೆ ಆದರೂ ಮಂಜುನಾಥ ಶೆಟ್ಟರು ಗೆಲ್ಲುವುದಕ್ಕೆಂದೇ ರೂಪಿತವಾಗಿದ್ದ 6ನೇ ವಿಭಾಗದಲ್ಲಿ 'ಗೆಲ್ಲುವ ಕುದುರೆ'ಯೆದುರು ಕೊನೆತನಕ ಸೆಣಸಿದ್ದೇ ಅವರ ಹೆಗ್ಗಳಿಕೆ.

ಸ್ಪರ್ಧೆಗಿಳಿಯದಿದ್ದ ಕಳೆದಬಾರಿಯ ಸದಸ್ಯರು : ಉಪಾಧ್ಯಕ್ಷ ನಾರಾಯಣ ಭಟ್ (ಅವರ ಸೊಸೆ ಅನ್ನಪೂರ್ಣ ಸ್ಪರ್ಧಿಸಿ ಸೋತಿದ್ದಾರೆ), ಡಿ. ಹರೀಶ್ (ಇವರ ಪತ್ನಿ ಗೌರಮ್ಮ ಭಾರೀ ಅಂತರದಿಂದ ಗೆದ್ದಿದ್ದಾರೆ), ರೋಹಿಣಿ ವೆಂಕಟೇಶ ಭಟ್, ಎಸ್. ಕೆ. ನಾಯಕ್ ಮತ್ತು ನಾಗರಾಜ್.

ಶೃಂಗೇರಿ

ಜನತಾ ದಳದ ವಿ. ಶೇಷಾದ್ರಿ ಭಟ್, ಮಾಜಿ ಕೌನ್ಸಿಲರ್ ಎಚ್.ಡಿ. ಪ್ರಭಾಕರ್ ಗೆದ್ದವರಲ್ಲಿ ಪ್ರಮುಖರು. [ಕಳೆದ ಕೌನ್ಸಿಲ್ ಪೈಕಿ ಇವರೊಬ್ಬರೇ ಗೆದ್ದಿರುವುದು] ಸೋತವರಲ್ಲಿ ಕಳೆದ ಬಾರಿಯ ಸದಸ್ಯರುಗಳಾದ ಟಿ ಕೃಷ್ಣ, ಟಿ.ಎನ್. ಕೃಷ್ಣಭಟ್, ಜಿಯಾ ಅಹಮದ್, ಕಮಲಮ್ಮ, ನರಸಿಂಹಮೂರ್ತಿ ಹಾಗೂ ಬಿಜೆಪಿಯ ವಿ. ಸುಬ್ರಮಣ್ಯ ಭಟ್, ಪಕ್ಷೇತರ ಅಭ್ಯರ್ಥಿ, ಪತ್ರಕರ್ತ ಎ. ಸಿ. ಪಾಂಡುರಂಗ ಮುಂತಾದವರು ಪ್ರಮುಖರು.

ಕಳೆದ ಬಾರಿಯ ಕೌನ್ಸಿಲ್ ಪೈಕಿ ಅಧ್ಯಕ್ಷ ಕೆ.ಆರ್. ಅಣ್ಣಯ್ಯ ಹೆಗ್ಡೆ, ಉಪಾಧ್ಯಕ್ಷೆ ಶೈಲಜಾ ರತ್ನಾಕರ ಹೆಗ್ಡೆ, ಮಾಜಿ ಅಧ್ಯಕ್ಷ ಎ ಎಸ್. ಚಂದ್ರಶೇಖರ್, ಲಲಿತಮ್ಮ, ಸುಬ್ರಮಣ್ಯ ಬಾಬು, ಡಾ॥ ಎಲ್. ಎಂ. ಭಟ್, ನರಸಿಂಹ ಪಂಡಿತ್, ಎನ್. ಎಸ್. ರಾಮಸ್ವಾಮಿ ಇವರುಗಳು ಸ್ಪರ್ಧಿಸಿರಲಿಲ್ಲ.

ನ. ರಾ. ಪುರ

ಗೆದ್ದ ಪ್ರಮುಖರಲ್ಲಿ ಸತತ 4ನೇ ಬಾರಿಗೆ ಆಯ್ಕೆಯಾಗುತ್ತಿರುವ ಜನತಾ ದಳದ ಲಕ್ಷ್ಮಣ ಶೆಟ್ಟಿ, ಕಾಂಗ್ರೆಸ್‌ಯ ಎಚ್. ಬಿ. ರಘುವೀರ್, ಮಾಜಿ ಸದಸ್ಯರುಗಳಾದ ಎಚ್. ಜಿ. ಭಾಸ್ಕರ, ಶಾರದಮ್ಮ ಮುಂತಾದವರಿದ್ದಾರೆ.

ಸೋತವರಲ್ಲಿ ಕಳೆದ ಬಾರಿಯ ಪ್ರಧಾನ ಟಿ ವಿ ವರ್ಗೀಸ್ (ರಾಜು) ಪ್ರಮುಖರು. ಗೆದ್ದ 6 ಜನ ಕಾಂಗ್ರೆಸ್ ಸದಸ್ಯರಲ್ಲಿ 5 ಜನ ಇವರ ಗುಂಪಿನವರಾಗಿದ್ದು, ಇವರೇ ಸೋತಿರುವುದು ಒಂದು ದೊಡ್ಡ ಆಘಾತ ನೆನ್ನಿಸಿದೆ. ಜನತಾ ದಳದ (ಕಳೆದ ಸಲದ) ಸದಸ್ಯರಾಗಿದ್ದ ಸೈಯದ್ ಅಹಮದ್, ಮಾಜಿ ಸದಸ್ಯರುಗಳಾದ ಕಾಂಗ್ರೆಸ್‌ನ ಟಿ. ಎಸ್. ನಾಗರಾಜ ಶೆಟ್ಟಿ, ಸರೋಜಮ್ಮ, ಬಿಜೆಪಿಯ ಎಚ್. ಜಿ. ಬಾಲಕೃಷ್ಣ, ಪಕ್ಷೇತರ ಆರ್. ಬಾಲಕೃಷ್ಣ ಮುಂತಾದವರು ಸೋತ ಇತರ ಪ್ರಮುಖರು.

ಕಳೆದ ಬಾರಿಯ ಕೌನ್ಸಿಲ್ ಸದಸ್ಯರಲ್ಲಿ ಡಿ.ಕೆ. ರವೀಂದ್ರ, ಲಲಿತಮ್ಮ, ಮೊಳ್ಳಯ್ಯ, ವನಮಾಲಾ, ... ಇವರುಗಳು ಸ್ಪರ್ಧಿಸಿರಲಿಲ್ಲ

'ಮನುಜ ಮತ' ಪುನರಾರಂಭ

ಎಂಟು ವರ್ಷದ ಹಿಂದೆ ದಿನಪತ್ರಿಕೆಯಾಗಿ ನ ರಾ. ಪುರದಲ್ಲಿ ಆರಂಭವಾಗಿ ನಿಂತಿದ್ದ 'ಮನುಜ ಮತ' ಪತ್ರಿಕೆ ಸಾಮಿನಾಥ್ ಬಾಲಂಕಿಯವರ ಸಂಪಾದಕತ್ವದಲ್ಲಿ ವಾರಪತ್ರಿಕೆಯಾಗಿ ಏ. 18 ರಿಂದ ಪುನರಾರಂಭಗೊಂಡಿತು. ಬಸ್ತಿಮಠದ ಸ್ವಾಮೀಜಿ ಮೊದಲ ಸಂಚಿಕೆ ಬಿಡುಗಡೆ ಮಾಡಿದರು. ತಹಸೀಲ್ದಾರ್ ಪ್ರಭಾಕರ ಶರ್ಮ ಮತ್ತು ಎ. ಪಿ. ಗೋವಿಂದೇಗೌಡ ಮುಖ್ಯ ಅತಿಥಿಗಳಾಗಿದ್ದರು.. (ವರದಿ : ಜಗತ್ಪಾಲ್)

ಅಭ್ಯರ್ಥಿಗಳು ಗಳಿಸಿದ ಮತಗಳ ವಿವರ

ಕೊಪ್ಪ ನ ರಾ ಪು ಮಂಡಲಗಳ ಕ್ಷೇತ್ರವಾರು ಅಭ್ಯರ್ಥಿಗಳ ಮತ್ತು ಅವರು ಗಳಿಸಿದ ಮತಗಳ ಪಟ್ಟಿ:—

ಕೊಪ್ಪ

1ನೇ ವಿಭಾಗ : ಟಿ ಪಿ ಭಾಗೀರಥಿ (ಕಾಂ)–197, ಅನಸೂಯಮ್ಮ–195, ಅನ್ನಪೂರ್ಣ–137; **ವೇಣುಗೋಪಾಲ್** (ಪಕ್ಷೇತರ)–215, ಕುಸುಮಾ (ಕಾಂ) 200; ಕೆ. ಕೃಷ್ಣ (ದಳ)–302, ಶ್ರೀಶಶಿ ಕುಮಾರ್ (ಕಾಂ.)–201, ಎ ಜಿ. ಗೋಪಾಲ - 155, ಖುದ್ದೂಸ್ – 101, ಅಬ್ದುಲ್ ಅಜೀಜ್–48, ಹೆನ್ರಿ–39, ಜಯಪ್ರಕಾಶ್–26, ಪಿ. ಕೃಷ್ಣ ಶೆಟ್ಟಿ–10 ಪಿ ಸಿ. ಜಾನ್–10. (ಒಟ್ಟು ಮತಗಳು, 1292, ಚಲಾಯಿಸಿದವು 746; ಕುಲಗೆಟ್ಟವು-5)

2ನೇ ವಿಭಾಗ: ಗೌರಮ್ಮ (ದಳ) (ಪ. ಬುಡಕಟ್ಟು ಮಹಿಳಾ ಮೀಸಲು)–273, ಸುಶೀಲ ಲಕ್ಷ್ಮಣ್ (ಕಾಂ)–103; **ಎ. ವೈ. ಪ್ರಸನ್ನ ಕುಮಾರ್** (ಪ)–253, ಇಕ್ಬಾಲ್ ಅಹಮದ್ (ಕಾಂ) – 151, ಅರುಣ್ ಕುಮಾರ್ 60, ಪಿ. ಕೃಷ್ಣ ಶೆಟ್ಟಿ 21, ಆಲ್‌ಫ್ರೆಡ್ ಡಿಸೋಜ 20, ಸೂರ್ಯ ನಾರಾಯಣ (ಸ್ವಾಮಿ)–20, ಪಶುಪತಿ 17. (978–532–9)

3ನೇ ವಿಭಾಗ : ಪಿ. ಬಿ. ವಿವೇಕ್ (ಕಾಂ) 62, ಖಾದರ್ (ದಳ) 52, ಎಂ. ಎಸ್. ನಾರಾಯಣ್ 38, ಗುರುರಾಜ್ 33. ವಾಗೀರಾವ್ 7, ಕೆ ಎನ್. ಶಿವಾನಂದ (ರಿಟೈರ್ಡ್)–1 (249–201–3)

4ನೇ ವಿಭಾಗ : ಮುಹಮದ್ ಸಾದಿಕ್ (ಕಾಂ) 166, ಬಿ.ಎನ್.ಜಿ.ಕೆ. ಆಚಾರ್ (ದಳ) 61, ಶೀನ ಭಂಡಾರಿ 61, ರಾಜಾರಾಂ ಕಾಮತ್ 36, ಚಿಕ್ಕೇಗೌಡ (ಸಿಪಿಐ) 11 (540–349–5)

5ನೇ ವಿಭಾಗ : ಗೋಪಿ (ಕಾಂ)–179, ಜಾನಕಿ ನಾಗರಾಜ್ (ದಳ) 175, ಸುಮತಿ 77; ಸದಾಶಿವ (ಕಾಂ)–145, ಶಂಕರ ನಾಯರ್–132; **ಶ್ರೀನಿವಾಸ ಶೆಟ್ಟಿ**–266, ಅಣ್ಣಪ್ಪ ನಾಯರ್ 166, ಸಂಜೀವ (ಸಿಪಿಐ)–84, ಕೆ ಜಿ. ಚಂದ್ರಶೇಖರ್ 38, ಮುಹಮದ್ ಗೌಸ್ 12 (679–456–4).

6ನೇ ವಿಭಾಗ : ಕೆ. ವಿ. ಮಂಜುನಾಥ ಶೆಟ್ಟಿ (ದಳ)–136, ಅಣ್ಣಪ್ಪ ನಾಯಕ್ [ಕಾಂ]–71. (268–209–2).

ನ.ರಾ. ಪುರ

1ನೇ ವಿಭಾಗ : ಎಚ್. ಬಿ. ರಘುವೀರ್ (ಕಾಂ) 232, **ಇಬ್ರಾಹಿಂ ಯಾನೆ ರಾಜನ್** (ಪಕ್ಷೇತರ) 74, **ಮೊೈದಿನ್ ಬ್ಯಾರಿ ಯಾನೆ ಮೋಣುಕಾಕಾ** (ಪಕ್ಷೇತರ) 71, **ರತ್ನಮ್ಮ** (ಕಾಂ)–44. ಎಚ್. ಸುರೇಶ್ 91, ಎನ್. ಎಂ. ಅನಂತಮೂರ್ತಿ (ಸಿಪಿಐ) 5, ಟಿ ವಿ. ವರ್ಗೀಸ್ (ಕಾಂ), 71, ಎಜಾಸ್ ಅಹಮದ್ 59, ಕಾಂಡಿಪ್ಪನ್ 47, ನಿಜಾಮ್ ಪಾಶಾ (ಕಾಂ) 53, ಮಂಜಮ್ಮ 25. ಸೈಯದ್ ಅಜೀಜ್ 66

2ನೇ ವಿಭಾಗ:- ಲಕ್ಷ್ಮಣಶೆಟ್ಟಿ (ದಳ) 410, ಕೆ. ಅಣ್ಣಪ್ಪ (ದಳ) 322, **ಶಾರದಮ್ಮ** (ದಳ) 233, ಫೈರೋಜ್ (ಕಾಂ) 155, ಶಿವಮ್ಮಯ್ಯ (ಕಾಂ) 108, ಲಕ್ಷ್ಮಮ್ಮ (ಕಾಂ) 231

3ನೇ ವಿಭಾಗ:- ಎಚ್. ಎಸ್. ಕೃಷ್ಣಮೂರ್ತಿ (ಪಕ್ಷೇತರ) 124, **ಹೇಮಾ** (ಪ) 102, ಸೈಯದ್ ರಹೀಂ (ಕಾಂ) 159, ಎಂ. ಒ ಜೋಯ್ 64, ಟಿ. ಎಸ್. ನಾಗರಾಜ ಶೆಟ್ಟಿ (ಕಾಂ) 73, ಸರೋಜಮ್ಮ (ಕಾಂ) 59, ಸೈಯದ್ ಅಹಮದ್ (ದಳ) 103, ಆರ್. ಬಾಲಕೃಷ್ಣ 83, ಎಚ್. ಜಿ ಬಾಲಕೃಷ್ಣ (ಬಿಜೆಪಿ) 26.

4ನೇ ವಿಭಾಗ:- ರವೀಂದ್ರ (ದಳ) 273, **ಪಾಪಯ್ಯ**(ದಳ) 188, ಎ ಆರ್. ಗುರುಮೂರ್ತಿ (ಕಾಂ) 257, ಕೃಷ್ಣ (ಕಾಂ) 139, ಎನ್. ಆರ್. ದೇವೇಂದ್ರ (ಬಿಜೆಪಿ) 81, ದೇವಣ್ಣ 60.

5ನೇ ವಿಭಾಗ : ನಜೀರ್ ಮುಹಮ್ಮದ್ (ಕಾಂ). 322, **ಎಚ್. ಜಿ. ಭಾಸ್ಕರ** (ಕಾಂ) 265, **ಶಾರದಮ್ಮ** (ಕಾಂ) 254, ಕೆ.ಎಸ್. ಸುರೇಶ್ (ಬಿಜೆಪಿ) 227, ಶೈಲಜಾ (ಬಿಜೆಪಿ) 165, ಪಾಂಡುರಂಗ 66, ಟಿ. ಆರ್. ಗಣೇಶ್ ಕುಮಾರ್ 185, ಮುಹಮದ್ ಫೈರೋಜ್ 156, ಎಂ. ಮೋಹನ 133, ಟಿ ಗಣೇಶ್ 69, ಯಶೋದ (ದಳ) 57, ಸೈಯದ್ ಜಿಯಾವುಲ್ಲಾ 9.

ಗೆದ್ದವರನ್ನು ಅಭಿನಂದಿಸುವು... ಸೋತ ಕೆಲ ಮಂದಿ ಸಜ್ಜನ ಅಭ್ಯರ್ಥಿ... ಸಾಂತ್ವನ ಹೇಳುವುದು ಈ ಸಂದರ್ಭ... ಅಗತ್ಯವೇನೋ ಎನ್ನಿಸುತ್ತಿದೆ. ಅವ... ಮನಸ್ಸನ್ನು ತೀರಾ ಮುದುಡಿಸಿಕೊ... ಬದಲು, ಫಲಿತಾಂಶವನ್ನು ಕ್ರೀಡಾ ಮ... ಭಾವದಿಂದ ಸ್ವೀಕರಿಸುವುದು ಅಗತ್ಯ... ತ್ತು ಅನಿವಾರ್ಯ ತಾನೆ? —ಸಂಪ...

ಶೃಂಗೇರಿ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಶೃಂಗೇರಿ : ಈ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಬಾಲಕರ ವಿದ್ಯಾರ್ಥಿ ನಿಲಯಗಳನ್ನು 1990ನೇ ಜೂನ್ 1ರಿಂದ ಪ್ರಾರಂಭಿಸಲಾಗುವುದು. ಈ ವಿದ್ಯಾರ್ಥಿ ನಿಲಯಗಳಲ್ಲಿ 5ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದು. ವಿದ್ಯಾರ್ಥಿಗಳನ್ನು ಸೇರಿಸಬಯಸುವವರು ಅರ್ಜಿಗಳನ್ನು ಆಯಾ ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಕರು ಅಥವಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಿಂದ ದಿನಾಂಕ 10.5.1990ರಿಂದ ಪಡೆಯಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಕಂಡ ದಾಖಲೆಗಳೊಂದಿಗೆ 1.6.90ರಿಂದ 5.6.90ರೊಳಗೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಲ್ಲಿ ಸಲ್ಲಿಸಬೇಕು : 1. ಆದಾಯ ಮತ್ತು ಜಾತಿ ದೃಢೀಕರಣ ಪತ್ರ, 2 ಸಂಬಂಧಪಟ್ಟ ಶಾಲೆಯಿಂದ ಉತ್ತೀರ್ಣರಾಗಿರುವ ಬಗ್ಗೆ ಅಂಕ ಪಟ್ಟಿ, 3. ಹೊಸದಾಗಿ ಶಾಲೆಗೆ ಸೇರಿರುವ ಬಗ್ಗೆ ಶಾಲೆಯ ಮುಖ್ಯೋಪಾಧ್ಯಾಯರಿಂದ ಪ್ರಮಾಣ ಪತ್ರ.

ಧನ್ಯವಾದಗಳು

ದಿನಾಂಕ. 29–4–90 ರಂದು ನಡೆದ ಕೊಪ್ಪ ಮಧ್ಯಾಂತರ ಮಂ... ಪಂಚಾಯ್ತಿ ಚುನಾವಣೆಯಲ್ಲಿ 1ನೇ ಡಿವಿಜನ್ ಮೀಸಲು ಕ್ಷೇತ್ರದಿಂದ ಸ್ಪರ್ಧಿ... ನನಗೆ ಮತ ನೀಡಿ ಜಯಶಾಲಿಯಾಗಿಸಿದ ಎಲ್ಲಾ ಮತದಾರ ಬಾಂಧವರಿಗೂ, ... ಗೆಲುವಿಗೆ ಶ್ರಮಿಸಿದ ಹಾಗೂ ಸಹಕಾರ ನೀಡಿದ ಎಲ್ಲಾ ಮಿತ್ರರು ಮತ್ತು ಅಭಿಮಾ... ಗಳಿಗೂ ಆತ್ಮೀಯ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನೀವೆಲ್ಲರೂ ನನ್ನ ಮೇಲೆ ... ರುವ ವಿಶ್ವಾಸ, ಅಭಿಮಾನಗಳನ್ನು ಸಾರ್ಥಕಗೊಳಿಸಲು ಸದಾ ಶಕ್ತಿ ಮೀರಿ ಶ್ರಮಿ... ತ್ತೇನೆ.

ವೇಣುಗೋಪಾಲ ಕೆ. ರಾಮಯ್...

ಸಿಂಡಿಕೇಟ್ ಬ್ಯಾಂಕ್. ಕೊಪ್ಪ.

ಹಾರ್ದಿಕ ಕೃತಜ್ಞತೆಗಳು

ದಿನಾಂಕ. 29–4–90 ರಂದು ನಡೆದ ಕೊಪ್ಪ ಮಧ್ಯಾಂತರ ಮಂ... ಪಂಚಾಯ್ತಿ ಚುನಾವಣೆಯಲ್ಲಿ 4 ನೇ ವಿಭಾಗದಿಂದ ಕಾಂಗ್ರೆಸ್ (ಐ) ಪ... ಪರವಾಗಿ ಸ್ಪರ್ಧಿಸಿದ್ದ ನನಗೆ ಅತ್ಯಧಿಕ ಮತ ನೀಡಿ ನನ್ನನ್ನು ಗೆಲ್ಲಿಸಿದ ಎಲ್ಲಾ ... ದಾರ ಬಾಂಧವರಿಗೂ, ನನ್ನ ಪರವಾಗಿ ಶ್ರಮಿಸಿದ ಎಲ್ಲ ಕಾರ್ಯಕರ್ತರು ಮ... ಅಭಿಮಾನಿಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಎಂ. ಎಚ್. ಮಹಮದ್ ಸಾದಿಕ್...

ಮಾಜಿ ಪುರಸಭಾಧ್ಯಕ್ಷ, ಕೊಪ್ಪ.

ಪ್ರಿಯ ಮತದಾರ ಬಾಂಧವರೆ,

ದಿನಾಂಕ. 29–4–90 ರಂದು ಕೊಪ್ಪ ಮಧ್ಯಾಂತರ ಮಂಡಲ ಪಂಚಾಯ... ನಡೆದ ಚುನಾವಣೆಯಲ್ಲಿ 2ನೇ ವಿಭಾಗದಿಂದ ನನ್ನನ್ನು ಭಾರಿ ಬಹುಮತದಿಂ... ಚುನಾಯಿಸಿದ ನಿಮಗೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ. ಅಂತೆ... ನನ್ನ ಮೇಲೆ ನೀವಿಟ್ಟ ವಿಶ್ವಾಸಕ್ಕೆ ಪ್ರತಿಯಾಗಿ ಸದಾ ನಿಮ್ಮೊಂದಿಗೆ ಸ್ಪಂದಿ... ಶಕ್ತಿ ಮೀರಿ ಪ್ರಯತ್ನಿಸುತ್ತೇನೆ.

ನನ್ನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ನನ್ನೆಲ್ಲ ಮಿತ್ರರಿಗೂ ಆತ್ಮೀ... ಅಭಿನಂದನೆಗಳು.

ಎ. ವೈ. ಪ್ರಸನ್ನಕುಮಾರ...

ಬಾಳಗಡಿ ರಸ್ತೆ, ಕೊಪ್ಪ.

ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘ ನಿ.,

ಕೊಪ್ಪ ಚಿಕ್ಕಮಗಳೂರು ಜಿಲ್ಲೆ.

ದೂರವಾಣಿ : ...

ಸಂಕ್ಷಿಪ್ತ ಪ್ರಕಟಣೆ

ಸಂಖ್ಯೆ. ಲ್ಯಾಂಪ್ಸ್: ಕೊಪ್ಪ. ಎಂ.ಎಫ್.ಪಿ.:/15:90–91 ದಿನಾಂಕ. 20–4...

ಈ ಮೂಲಕ ತಿಳಿಯಪಡಿಸುವುದೇನೆಂದರೆ ಗಿರಿಜನ ದೊಡ್ಡ ಪ್ರಮಾಣದ ... ಧೋದ್ದೇಶ ಸಹಕಾರ ಸಂಘದಲ್ಲಿ ಹಾಲಿ ದಾಸ್ತಾನು ಇರುವ ಸುಮಾರು 80 ಕ್ವಿಂ... ಸೀಗೆ ಕಾಯಿಯನ್ನು ಟೆಂಡರ್–ಕಂ–ಹರಾಜು ಮುಖಾಂತರ, ದಿನಾಂಕ 21–... ರಂದು ಮಧ್ಯಾಹ್ನ 3 ಘಂಟೆಗೆ ಸಂಘದಲ್ಲಿ ವಿಲೇವಾರಿ ಮಾಡಲಾಗುವುದು. ಟೆಂ... ಕಂ–ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಇದ್ದವರು ತಮ್ಮ ಟೆಂಡರನ್ನು ದಿ... 21–5–90 ರಂದು ಮಧ್ಯಾಹ್ನ 2 ಘಂಟೆಯವರೆಗೆ ಸಂಘದಲ್ಲಿ ಸಲ್ಲಿಸಿದಲ್ಲಿ ... ಲಾಗುವುದು. ಟೆಂಡರನ್ನು ಅದೇ ದಿನ ಆಡಳಿತ ಮಂಡಳಿಯವರ ಹಾಗೂ ... ಮತ್ತು ಅರಣ್ಯ ಇಲಾಖಾಧಿಕಾರಿಗಳ ಸಮಕ್ಷಮದಲ್ಲಿ ತೆರೆಯಲಾಗುವುದು.

ಹೆಚ್ಚಿನ ವಿವರವನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬ... ಸದ್ರಿ ಟೆಂಡರ್ ಫಾರಂಗಳನ್ನು ರೂ. 10–00 ಪಾವತಿ ಮಾಡಿ ತಾ. 21–... ರಂದು ಮಧ್ಯಾಹ್ನ 2 ಘಂಟೆಯ ವರೆಗೆ ಪಡೆಯಬಹುದಾಗಿದೆ.

ಬಿ. ಎಲ್. ನರಸಿಂಹ...
ಕಾರ್ಯದರ್ಶಿ,
ಲ್ಯಾಂಪ್ ಸೊಸೈಟಿ, ಕೊ...

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ